# Smile Please Creations

*for every occasion, custom & handmade*

VOL: 11 FEBRUARY 2026

Subscribe

WELCOME TO OUR

## *Monthly Newsletter*

### Editorial



Smile Please Creations wishes you all a very happy, Maha Shivaratri!

## In this newsletter:


- Product Gallery - Page 2
- ರೀತಿ- ನೀತಿ - Page 3
- ಕಲೆ-ನೆಲೆ - Page 4
- Dancing Steps - Page 5
- Puzzle Time - Page 6
- Winners & Ans for January month's puzzles - Page 7
- Boggle Rules - Page 8

# Product Gallery

## Silk Thread Jewellery set



- Long necklace with beads wrapped in silk thread
- Silk thread wrapped Jhumka with oxidized ear stud
- Bracelet with silk thread beads

## MDF Earrings with thread work



- These are light weight earrings made from MDF base.
- They are painted and then, decorated with thread work and beads

# ಈ ತಿಂಗಳ ವಿಚಾರ

ಇಂದಿನದನ್ನು ಮಾತ್ರ ಯೋಚನೆ ಮಾಡಿ ಮಾಡಬೇಕಾದದ್ದನ್ನು ಇಂದೇ ಮಾಡಿ ಮುಗಿಸಿದರೆ, ನಾಳೆ ತನ್ನಂತಾನಾಗಿಯೇ ಮಾಡಬೇಕಾದದ್ದು ಆಗುತ್ತದೆ. ನಾಳೆಯ ಬಗ್ಗೆ ಚಿಂತಿಸಬೇಕಾದ ಅವಶ್ಯಕತೆ ಇಲ್ಲ.

## ರೀತಿ- ನೀತಿ

## ಕಥಾ ಮಾಲಿಕೆ-11

## ಕುರಿ ಮರಿಯ ಜಾಣ್ಮೆ

ಕುರಿ ಮರಿಯ ಜಾಣ್ಮೆ, ಒಮ್ಮೆ ಒಂದು ಕುರಿಮರಿ ಹಾಯಾಗಿ ಹುಲ್ಲು ಮೇಯುತ್ತಿತ್ತು. ಅಲ್ಲಿಗೆ ಒಂದು ತೋಳ ಬಂದಿತು. ಕುರಿ ಮರಿ ತನ್ನಲ್ಲಿ ತಾನೇ ಮಗ್ನವಾಗಿದ್ದರಿಂದ ತೋಳ ಬಂದದ್ದು ತಿಳಿಯಲೇ ಇಲ್ಲ. ತೋಳವನ್ನು ಹತ್ತಿರ ನೋಡಿದ ಕೂಡಲೇ ಆ ಕುರಿಮರಿಗೆ ಭಯ ಪ್ರಾರಂಭವಾಯಿತು. ಆದರೆ ಅದು ಜಾಣ ಕುರಿಮರಿಯಾಗಿತ್ತು. ನನ್ನನ್ನು ತಿನ್ನಬೇಡ ನಾನು ಈಗ ತಾನೇ ತಿಂದಿರುವ ಹಸಿರು ಹುಲ್ಲು ಅರಗಿ ಮಾಂಸವಾಗಬೇಕಾದರೆ ಸ್ವಲ್ಪ ಹೊತ್ತು ಬೇಕು. ನೀನು ಸ್ವಲ್ಪ ಹೊತ್ತು ನನ್ನನ್ನು ನೃತ್ಯ ಮಾಡಲು ಬಿಟ್ಟರೆ ನನ್ನಿಂದ ನಿನಗೆ ರುಚಿರುಚಿಯಾದ ಮಾಂಸ ತಿನ್ನಲು ದೊರೆಯುತ್ತದೆ. ತೋಳ ಓ ಹೌದಾ! ಹಾಗಾದರೆ ಸರಿ. ನಾನು ಇಲ್ಲೇ ನೋಡುತ್ತಿರುತ್ತೇನೆ. ನೀನು ತಪ್ಪಿಸಿಕೊಂಡು ಹೋಗಲಾರೆ. ನರ್ತಿಸು ನಂತರ ನಾನು ನಿನ್ನ ರುಚಿ ರುಚಿಯಾದ ಮಾಂಸವನ್ನು ತಿಂದು ಹಸಿವು ನೀಗಿಸಿಕೊಳ್ಳುತ್ತೇನೆ. ಸರಿ ಸರಿ ಎಂದಿತು ಕುರಿಮರಿ. ನಾನು ಚೆನ್ನಾಗಿ ನೃತ್ಯ ಮಾಡಬೇಕೆಂದರೆ ನನ್ನ ಕತ್ತಿನಲ್ಲಿರುವ ಈ ಗಂಟೆಯನ್ನು ನೀನು ತೆಗೆದುಕೊಂಡು ಜೋರಾಗಿ ಬಾರಿಸು. ನನಗೆ ಆಗ ನರ್ತಿಸಲು ಹುಮ್ಮಸ್ಸು ಬರುತ್ತದೆ ಎಂದಿತು. ಆ ತೋಳ ಸರಿಯೆಂದು ಗಂಟೆ ಬಾರಿಸಲು ಶುರು ಮಾಡಿತು. ಅಲ್ಲಿಯೇ ಇದ್ದ ಕುರುಬ ತನ್ನ ಕುರಿಮರಿಯನ್ನು ಹುಡುಕಿಕೊಂಡು ಓಡಿ ಬಂದ. ಕುರುಬನನ್ನು ನೋಡಿದ ತಕ್ಷಣ ಆ ತೋಳ ಓಡಿಹೋಯಿತು.

ಎಂತಹ ಆಪತ್ತಿನಿಂದಲೂ ಸ್ವಲ್ಪ ಬುದ್ಧಿ ಉಪಯೋಗಿಸಿದರೆ ಪಾರಾಗಬಹುದು. ಇನ್ನೊಂದು ಕಥೆ ಗೊತ್ತಿದೆ ಅಲ್ಲವೇ. ಹನುಮಂತ ಸಮುದ್ರ ಲಂಘನ ಮಾಡುವಾಗ ಸುರಸೆಯ ಬಾಯೊಳಗೆ ಹೋಗಿ ಹೊರಗೆ ಬರಬೇಕಾಗಿತ್ತು. ಆಗ ಅವನು ತನ್ನ ಗಾತ್ರವನ್ನು ಹಿಗ್ಗಿಸುತ್ತ ಹೋದ. ಹಾಗೆಯೇ ಸುರಸೆಯೂ ತನ್ನ ಆಕಾರವನ್ನು ಬೃಹದಾಕಾರ ಮಾಡಿದಳು. ತಕ್ಷಣವೇ ಹನುಮಂತ ಪುಟ್ಟ ಆಕಾರ ಪಡೆದು ಅವಳ ಬಾಯಿ ಮೂಲಕ ಹೊಟ್ಟೆ ಒಳಗೆ ಹೋಗಿ ಅದೇ ವೇಗದಲ್ಲಿ ಹೊರಗೆ ಬಂದ. **ಹೀಗೆ ಜಾಣ್ಮೆ ಇದ್ದರೆ ಎಂತಹ ಅಪಾಯದಿಂದಲೂ ಪಾರಾಗಬಹುದು. ಆದ್ದರಿಂದ ಯಾವುದೇ ಸನ್ನಿವೇಶದಲ್ಲಾದರೂ ನಿಮ್ಮ ಸಮಾಧಾನವನ್ನು ಕಾಪಾಡಿಕೊಂಡು ಹೇಗೆ ಪಾರಾಗಬಹುದು ಎಂದು ಆಲೋಚಿಸಿ. ಉಪಾಯ ದೊರೆತೇ ದೊರೆಯುತ್ತದೆ. ಭಯಪಟ್ಟರೆ ಏನೂ ತೋಚುವುದಿಲ್ಲ .**

**ಶ್ರೀಲತಾ, ಹಾಸನ**

# ಕಲೆ-ನೆಲೆ

ಸದಾಶಿವ ಸಮಾರಂಭಂ ಶಂಕರಾಚಾರ್ಯ ಮಧ್ಯಮಾಂ
ಅಸ್ಮದಾಚಾರ್ಯ ಪರ್ಯಂತಂ, ವಂದೇ ಗುರು ಪರಂಪರಾಂ||

ಶಾಂತಂ ಪದ್ಮಾಸನಸ್ಥಾಂ ಶಶಿಧರ ಮುಕುಟಂ
ಪಂಚವಕ್ತ್ರಂ ತ್ರಿನೇತ್ರಾಂ
ಶೂಲಂ ವಜ್ರಂ ಚ ಖಡ್ಗಂ ಪರಶಮಭಯದಾಂ
ದಕ್ಷಭಾಗೇ ವಹಂತಂ
ನಾಗಪಾಶಂಚ ಘಂಟಾಂ ಪ್ರಲಯ ಹ್ರತವಹಂಚ
ಸಾಂಕುಷಂ ವಾಮಭಾಗೇ,
ನಾನಾಲಂಕಾರ ಯುಕ್ತಾಂ ಸ್ಪಟಿಕಮಣಿ ನಿಭಂ
ಪಾರ್ವತೀಶಂ ನಮಾಮಿ|



ಎಲ್ಲರಿಗೂ ಶಿವರಾತ್ರಿಯ ಹಾರ್ದಿಕ ಶುಭಾಶಯಗಳು. ಈ ಬಾರಿಯ ಕಲೆ-ನೆಲೆ ಸರಣಿಯಲ್ಲಿ ಶಿವರಾತ್ರಿ ವಿಷಯವನ್ನು ತಿಳಿಯುವ ಪ್ರಯತ್ನ ಮಾಡೋಣ, ಬನ್ನಿ. ಶಿವರಾತ್ರಿ ಹೆಸರೇ ಸೂಚಿಸುವಂತೆ ಪರಶಿವನನ್ನು ರಾತ್ರಿ (ಪೂರ್ತಿಯಾಗಿ) ಭಕ್ತಿ, ಶ್ರದ್ಧೆಗಳಿಂದ ಪೂಜಿಸುವ ಹಿಂದೂಗಳ ಪ್ರಮುಖ ಹಬ್ಬವಾಗಿದ್ದು ಶಿವನಿಗೆ ಸಮರ್ಪಿತವಾಗಿದೆ. ಇದನ್ನು ಪ್ರತಿವರ್ಷ ಮಾಘ ಮಾಸ ಶಿಶಿರ ಋತು ಕೃಷ್ಣ ಪಕ್ಷದ ತ್ರಯೋದಶಿಯಂದು ಆಚರಿಸಲಾಗುತ್ತದೆ. 'ಓಂ ನಮಃ ಶಿವಾಯ' ಶಿವ ಪಂಚಾಕ್ಷರಿ ಮಂತ್ರದಿಂದ ಬಿಲ್ವಪತ್ರೆ, ಹಾಲು, ನೀರು ಅಭಿಷೇಕ ಮಾಡಿ ಶಿವನ ಕೃಪೆಗೆ ಪಾತ್ರರಾಗುತ್ತೇವೆ. ನಾಲ್ಕು ಯಾಮದ ಪೂಜೆ ಮಂದಿರಗಳಲ್ಲಿ ನಡೆಯುತ್ತದೆ. ಅಜ್ಞಾನವನ್ನು ಕಳೆದು ಸುಜ್ಞಾನ ಬೆಳಗಿಸುವ ಸಲುವಾಗಿ ಶಿವನನ್ನು ಪ್ರಾರ್ಥಿಸುವ ಶುಭದಿನ ಇದು. ಈ ರಾತ್ರಿ ಶಿವ ಮತ್ತು ಹಿಮವಂತನ ಪುತ್ರಿ ಪಾರ್ವತಿಯ ವಿವಾಹವಾದ ದಿನವೆಂದು ಪ್ರತೀತಿ. ಶಿವನು ಸೃಷ್ಟಿ- ಸ್ಥಿತಿ- ಲಯದ ನೃತ್ಯ (ತಾಂಡವ ನೃತ್ಯ) ಮಾಡಿದ ದಿನವೆಂದು ನಂಬಲಾಗಿದೆ. ಈ ರಾತ್ರಿ ಇವನು ಜ್ಯೋತಿರ್ಲಿಂಗವಾಗಿ ಅವತರಿಸಿದನು ಎಂಬ ಪ್ರತೀತಿ. ಬೇಟೆಗೆ ಹೊರಟು ದಾರಿ ತಪ್ಪಿದ ಬೇಡನು ಅನುದ್ದೇಶಿತವಾಗಿ ಉಪವಾಸ ಮಾಡಿ ಶಿವನಾಮ ಭಜಿಸುತ್ತಾ, ಜಾಗರಣೆ ಮಾಡಿ ಬಿಲ್ವಪತ್ರೆಯ ಮರದ ಮೇಲೆ ಕುಳಿತು ಎಲೆಯನ್ನು ಕೆಳಗಿದ್ದ ಶಿವ ಲಿಂಗದ ಮೇಲೆ ಕಿತ್ತು ಹಾಕಿದ ಈ ದಿನ, ಅವನ ಉದ್ಧಾರಕ್ಕೆ ಕಾರಣವಾದ ಸುದಿನ, ಶಿವರಾತ್ರಿ ಎಂದು ಹೇಳಲಾಗಿದೆ. ಮುಂದೆ ಶಿವರಾತ್ರಿ ಪೂಜೆಯ ಫಲದಿಂದ ರಾಜ ಚಿತ್ರಭಾನುವಾಗಿ ಜನಿಸಿದ ಎಂಬುದು ಕಥೆ. ಸಮುದ್ರ ಮಂಥನದ ಸಮಯದಲ್ಲಿ ಮೊದಲು ಬಂದ ಹಾಲಾ ಹಲವನ್ನು (ವಿಷ) ಲೋಕಕಲ್ಯಾಣಕ್ಕಾಗಿ ಪರಶಿವನೇ ಕುಡಿದುಬಿಟ್ಟ. ಅದೇ ಸಮಯಕ್ಕೆ ಪಾರ್ವತಿ ದೇವಿ ವಿಷವು ಶಿವನ ಹೊಟ್ಟೆ ಸೇರದಂತೆ ಆ ವಿಷವನ್ನು ಗಂಟಲಲ್ಲೇ ತಡೆ ಹಿಡಿದಳು. ವ್ಯಕ್ತಿ ನಿದ್ರೆಯಲ್ಲಿದ್ದಾಗ ವಿಷವು ಬೇಗನೆ ದೇಹದ ತುಂಬಾ ಹರಡುತ್ತದೆ. ಹಾಗಾಗಿ ದೇವತೆಗಳೆಲ್ಲರೂ ಶಿವನ ಭಜನೆ ಮಾಡಿ ಶಿವನನ್ನು ಎಚ್ಚರವಾಗಿರಿಸಿದರು. ಹೀಗಾಗಿ ಆ ಪವಿತ್ರ ದಿನವನ್ನು ಶಿವರಾತ್ರಿ ಎಂದು ಆಚರಿಸಲಾಗುತ್ತದೆ. ಮದುವೆಯಾಗದ ಹೆಣ್ಣು ಮಕ್ಕಳು ಶಿವರೂಪಿಯಾದ ಪತಿಗಾಗಿ ಪ್ರಾರ್ಥಿಸಿದರೆ, ಮುತ್ತೈದೆಯರು ಪತಿಯ ಶ್ರೇಯೋಭಿವೃದ್ಧಿಗಾಗಿ ಪ್ರಾರ್ಥಿಸುವುದು ಸಂಪ್ರದಾಯ. ಒಟ್ಟಿನಲ್ಲಿ ಶಿವರಾತ್ರಿಯಂದು ಕರುಣಾಮಯಿಯಾದ ಶಿವನನ್ನು ಭಕ್ತಿ ಶ್ರದ್ಧೆಯಿಂದ ಪೂಜಿಸಿದರೆ, ಸುಖ, ಶಾಂತಿ, ಸಮೃದ್ಧಿ, ಆರೋಗ್ಯ ದೊರೆಯುವುದೆಂಬ ನಂಬಿಕೆ ಆಸ್ತಿಕರದ್ದು.

ನೀಡು ಶಿವ, ನೀಡದಿರು, ಶಿವ ಬಾಗುವುದು ನನ್ನ ಕಾಯ.

**ಸತ್ಯಂ ಶಿವಂ ಸುಂದರಂ**

**ಪುಷ್ಪ ನಾಗಭೂಷಣ**



www.smilepleasecreations.com

# DANCING STEPS

## TANDAVA : The Divine Motion

आंगिकं भुवनं यस्य वाचिकं सर्ववाङ्ग्यम् |
आहार्यं चन्द्रतारादि तं नुमः सात्त्विकं शिवम् ||

He whose limbs are the universe,
Whose speech is the language of the world,
Whose ornaments are moon and stars,
I bow to him, the Cosmic dancer;

The meditation shloka of Shiva invokes the Nataraja form of him - 'the lord of dance'. Shiva has two states - Samadhi and Tandava. In the state of samadhi, he is a Nirguna (non materialised), in the state of tandava he is the Saguna (materialised). Shiva is the pioneer of dance, the universe is his dance school, he is called as the lord of Dance - Nataraja.

The uddhata form of dance, one that has high energy, vigorous and brisk movements was shown to Bharata muni through Shiva's chief attendant Tandu. Because Tandu performed this dance, it came to be known as Tāndava.

There are seven types of tānadavas, the first one is the Ananda tandava : the dance of bliss was performed by Shiva to enlighten the sages who had been immersed in scholasticism which made them forget the existence of God. This tandava was performed with joy thus calling it Ananda tandava. It was later revealed at the Jnana sabha in Chidambaram. The Ananda tandava symbolises five acts of the lord, creation, sustenance, dissolution, concealment and bestowment. These five tatvas are captured in the pancha sabhas of Nataraja where he danced different tandavas at the different sabhas.

The Kanaka sabha - Hall of gold is at Chidambaram where Shiva performed this Ananda tandava for sages and deities. Adi Shesha having heard Shiva's cosmic dance through Vishnu, desired to witness this from his eyes.



He came as Patanjali and performed severe penance to witness this dance. Another sage Vyagrapaada prayed to obtain the claws of a tiger so that he could easily obtain Bilva leaves to worship Shiva. Impressed by both of these devotees, Shiva blessed them with the visual treat of this dance of bliss. Other Sabhas are the

The iconic statue of Nataraja used by all dance forms in India is the pose performed during Ananda tandava where Shiva is seen in the middle of the ring of flames symbolising the cosmic cycle of the five divine acts. Nataraja is seen standing on the demon Apasmara who represents ignorance. Shiva who is the centre of the universe, the personification of the ultimate knowledge manages the cycle of life and death through this dance.

Wishing all the readers a Happy Mahashivaratri and continuing the other six tandavas in the upcoming columns.

**Vaishnavi J Koundinya**

# Boggle Time

| | | | |
|---|---|---|---|
| N | G | L | P |
| A | S | H | E |
| B | T | A | R |
| M | R | E | D |

**Point calculation**

5 letters - 1 point
6 letters - 2 points
7 letters - 3 points
8 letters - 4 points
9 letters - 9 points
10 letters - 10 points

Rules of the game -Form as many words as possible --> Rules given in next page

Send words with 5 letters and more
The names of 2 highest scorers will be announced in the next newsletter

## ಈ ಬಾರಿಯ ಸಮಸ್ಯೆ

ಯಾವುದಕ್ಕೆ ತಲೆಯೂ ಇದೆ ಬಾಲವೂ ಇದೆ ಆದರೆ ದೇಹವಿಲ್ಲ?

newsletter@smilepleasecreations.com
+91 6366684838

**Send in your answers on email or WhatsApp before 14th March 2026**

**Follow us on**

YouTube @SmilePleaseCreations5

@Smile Please Creations

query@smilepleasecreations.com

# Previous Months Answers

## Boggle Time

Please note that all the possible words are not listed here. Our focus in mainly on the longer words

Whale
Thread
Ideal
Angle
Handle
Clang
Trade
Thane
Redial
Earth
Thale
Lathe
Clade
Heart
Dearth

Calendar
Rehandle
Derange
Leather
Predial
Dangle
Endear
Gender
Lender
Lather
Rehang
Herald
Angel
Glace
Glade

Trade
Tread
Gland
Range
Glare
Ahead
Hatred

Congratulations!

**Winner**

Padma Bharadwaj - 19 points

| | | | |
|---|---|---|---|
| P | T | W | K |
| R | H | A | C |
| E | A | L | E |
| I | D | N | G |

## ಹಿಂದಿನ ತಿಂಗಳ ಸಮಸ್ಯೆಗೆ ಉತ್ತರ

ಆಕಾಶಕ್ಕೆ ಏರುವಾಗ ಎರಡು ರೆಕ್ಕೆ, ಭೂಮಿಗೆ ಇಳಿಯುವಾಗ ಎರಡು ಕಾಲು ನಾನು ಯಾರು?

**ವಿಮಾನ** ಮೇಲೆ ಹೋಗುವಾಗ ಅದರ ಎರಡು ರೆಕ್ಕೆಗಳು ಚಾಚಿ ಕೊಂಡಿರುತ್ತವೆ. ಕೆಳಗೆ ಇಳಿಯುವಾಗ ರೆಕ್ಕೆಗಳನ್ನು ಒಳಕ್ಕೆ ಎಳೆದುಕೊಂಡು ಚಕ್ರದ ಸಹಾಯದಿಂದ ಕೆಳಗೆ ಇಳಿಯುತ್ತದೆ.

Congratulations!

**Winner**


Padma Bharadwaj

query@smilepleasecreations.com

# Boggle Rules

Words must be at least five letters long and formed by connecting adjacent letters horizontally, vertically, or diagonally. Each letter can only be used once in a word, and no letter cube can be jumped over.

## CORRECT




## WRONG

